# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 249 |
| ಮಾನ್ಯ ಸದಸ್ಯರ ಹೆಸರು | ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 15/02/2024 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಮಿಕರ ಹೆಸರಿನಲ್ಲಿ ನೋಂದಾಯಿಸಿಕೊಂಡಿರುವ ಕಾರ್ಮಿಕರಲ್ಲದವರನ್ನು ಸರ್ಕಾರ ಗುರುತಿಸಿದೆಯೇ; ಗುರುತಿಸಿದ್ದಲ್ಲಿ, ಅದರ ಅಂಕಿ ಸಂಖ್ಯೆಗಳೇನು; (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಾಯಿತರಾದ ಅನರ್ಹ ಕಾರ್ಮಿಕರ ನೋಂದಣಿಯನ್ನು ಪತ್ತೆಹಚ್ಚಲಾಗಿದ್ದು, ವಿವರ ಈ ಕೆಳಕಂಡಂತಿದೆ.<br><br>ರಾಜ್ಯದಾದ್ಯಂತ **3,54,128** ಅನರ್ಹ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿಯನ್ನು ಪತ್ತೆಹಚ್ಚಲಾಗಿದ್ದು, ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಆ) | ಕಾರ್ಮಿಕರಿಗೆ ನೀಡುವ ಸೌಲಭ್ಯಗಳು ಅನರ್ಹರ ಪಾಲಾಗುವುದನ್ನು ತಡೆಹಿಡಿಯುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೀಡುತ್ತಿರುವ ಸೌಲಭ್ಯಗಳು ಅನರ್ಹ ನೋಂದಾಯಿತರ ಪಾಲಾಗುವುದನ್ನು ತಡೆಯಲು ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ.<br><br>**ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಮಂಡಳಿಯು ನಿಗಧಿಪಡಿಸಿರುವ ಅರ್ಹತಾ ಮಾನದಂಡಗಳನ್ನು ಪೂರೈಸದ ಕಾರ್ಮಿಕರು ನೋಂದಣಿಯಾಗುತ್ತಿರುವುದನ್ನು ತಡೆಯುವ ನಿಟ್ಟಿನಲ್ಲಿ ಇಂತಹ ಕಾರ್ಮಿಕರನ್ನು ಪತ್ತೆಹಚ್ಚಲು ಮತ್ತು ಅನರ್ಹ ಫಲಾನುಭವಿಗಳ ನೋಂದಣಿಯ ರದ್ದತಿಗಾಗಿ ದಿನಾಂಕ: 25-01-2023 ರಿಂದ ದಿನಾಂಕ: 25-02-2023 ರವರೆಗೆ ಬೋಗಸ್ ಕಾರ್ಡ್ ರದ್ದತಿ ಅಭಿಯಾನವನ್ನು ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ.<br><br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು), ಕರ್ನಾಟಕ ನಿಯಮಗಳು, 2006 ನಿಯಮ 20 ಅನ್ನು ತಿದ್ದುಪಡಿ ಮಾಡಿ ಉಪಬಂಧ (7) ಅನ್ನು ಸೇರಿಸಲಾಗಿದ್ದು, ಇದರನ್ವಯ ಮಂಡಳಿಯು ನಿಗಧಿಪಡಿಸಿರುವ ಅರ್ಹತಾ ಮಾನದಂಡಗಳನ್ನು ಪೂರೈಸದ ನೋಂದಣಿಯನ್ನು ರದ್ದುಪಡಿಸಲು ನೋಂದಣಾಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿದೆ. |

| | | |
|---|---|---|
| | | ರಾಜ್ಯದಾದ್ಯಂತ ಪ್ರಚಾರವಾಗುತ್ತಿರುವ 11 ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಿ ಅರ್ಹತಾ ಮಾನದಂಡಗಳನ್ನು ಪೂರೈಸದ ಕಾರ್ಮಿಕರು ಸ್ವಯಂ ಪ್ರೇರಿತರಾಗಿ ತಮ್ಮ ನೋಂದಣಿಯನ್ನು ರದ್ದುಪಡಿಸಿಕೊಳ್ಳಬೇಕೆಂದು, ಇಲ್ಲದಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದೆಂಬ ಮನವಿ ಹಾಗೂ ಎಚ್ಚರಿಕೆಯನ್ನು ನೀಡಲಾಗಿದೆ.<br><br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br>ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ ಮತ್ತು ಗಿಗ್ ಕಾರ್ಮಿಕರ ವಿಮಾ ಪರಿಹಾರ ಯೋಜನೆಯಡಿ ನೋಂದಣಿಗಾಗಿ ಸಲ್ಲಿಸಲಾದ ಅರ್ಜಿಗಳನ್ನು ನೋಂದಣಾಧಿಕಾರಿಗಳಾದ ಕಾರ್ಮಿಕ ಅಧಿಕಾರಿಗಳು/ ಕಾರ್ಮಿಕ ನಿರೀಕ್ಷಕರುಗಳು ಯೋಜನೆಗಳ ಮಾನದಂಡಗಳನ್ವಯ ನೋಂದಾಯಿಸುತ್ತಿದ್ದು, ಯಾವುದೇ ಅನರ್ಹ ಕಾರ್ಮಿಕರು ನೋಂದಣಿಯಾಗಿರುವುದಿಲ್ಲ. |
| ಇ) | ಅನರ್ಹ ಕಾರ್ಮಿಕ ಕಾರ್ಡ್ ಗಳನ್ನು ಶಾಶ್ವತವಾಗಿ ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ: | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಾಯಿತರಾದ 3,54,128 ಅನರ್ಹ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿಯನ್ನು ಪತ್ತೆಹಚ್ಚಲಾಗಿದ್ದು, ಈ ಅನರ್ಹ ಕಾರ್ಮಿಕ ಕಾರ್ಡ್-ಗಳನ್ನು ಶಾಶ್ವತವಾಗಿ ರದ್ದುಪಡಿಸಲು ಮಂಡಳಿಯ ವತಿಯಿಂದ ಕ್ರಮ ವಹಿಸಲಾಗಿದೆ. |
| ಈ) | ಅನರ್ಹ ಕಾರ್ಮಿಕ ಕಾರ್ಡ್ ಗಳನ್ನು ನೋಂದಾಯಿಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕಾರ್ಮಿಕ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ? (ಸಂಪೂರ್ಣ ಮಾಹಿತಿ ಒದಗಿಸುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಅನರ್ಹ ಕಾರ್ಮಿಕ ಕಾರ್ಡ್ ಗಳನ್ನು ನೋಂದಾಯಿಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕಾರ್ಮಿಕ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ. |

**ಕಾಇ 102 ಎಲ್ಇಟಿ 2024**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 249 (307)**

| ಕ್ರ.ಸಂ | ಕಛೇರಿಯ ಹೆಸರು | ರದ್ದುಪಡಿಸಲಾದ ಕಾರ್ಡ್ ಗಳ ಸಂಖ್ಯೆ. |
|---|---|---|
| 1 | ಕಾರ್ಮಿಕ ಅಧಿಕಾರಿ, ಬೆಂಗಳೂರು | 5768 |
| 2 | ಕಾರ್ಮಿಕ ಅಧಿಕಾರಿ, ಬೆಂಗಳೂರು ಗ್ರಾಮಾಂತರ | 534 |
| 3 | ಕಾರ್ಮಿಕ ಅಧಿಕಾರಿ, ಬಾಗಲಕೋಟೆ | 5057 |
| 4 | ಕಾರ್ಮಿಕ ಅಧಿಕಾರಿ, ಬೆಳಗಾವಿ | 1156 |
| 5 | ಕಾರ್ಮಿಕ ಅಧಿಕಾರಿ, ಬಳ್ಳಾರಿ | 1843 |
| 6 | ಕಾರ್ಮಿಕ ಅಧಿಕಾರಿ, ಬೀದರ್ | 32,187 |
| 7 | ಕಾರ್ಮಿಕ ಅಧಿಕಾರಿ, ಚಾಮರಾಜನಗರ | 808 |
| 8 | ಕಾರ್ಮಿಕ ಅಧಿಕಾರಿ, ಚಿಕ್ಕಮಗಳೂರು | 1634 |
| 9 | ಕಾರ್ಮಿಕ ಅಧಿಕಾರಿ ,ಚಿಕ್ಕಬಳ್ಳಾಪುರ | 1410 |
| 10 | ಕಾರ್ಮಿಕ ಅಧಿಕಾರಿ ಚಿತ್ರದುರ್ಗ | 1851 |
| 11 | ಕಾರ್ಮಿಕ ಅಧಿಕಾರಿ, ದಾವಣಗೆರೆ | 1676 |
| 12 | ಕಾರ್ಮಿಕ ಅಧಿಕಾರಿ, ಹುಬ್ಬಳ್ಳಿ | 10780 |
| 13 | ಕಾರ್ಮಿಕ ಅಧಿಕಾರಿ, ಮಂಗಳೂರು | 1120 |
| 14 | ಕಾರ್ಮಿಕ ಅಧಿಕಾರಿ, ಗದಗ | 3531 |
| 15 | ಕಾರ್ಮಿಕ ಅಧಿಕಾರಿ, ಹಾಸನ | 2041 |
| 16 | ಕಾರ್ಮಿಕ ಅಧಿಕಾರಿ, ಹಾವೇರಿ | 223230 |
| 17 | ಕಾರ್ಮಿಕ ಅಧಿಕಾರಿ, ಕಲಬುರಗಿ | 7233 |
| 18 | ಕಾರ್ಮಿಕ ಅಧಿಕಾರಿ, ಕೊಡಗು | 170 |
| 19 | ಕಾರ್ಮಿಕ ಅಧಿಕಾರಿ, ಕೋಲಾರ | 1456 |
| 20 | ಕಾರ್ಮಿಕ ಅಧಿಕಾರಿ, ಕೊಪ್ಪಳ | 1309 |
| 21 | ಕಾರ್ಮಿಕ ಅಧಿಕಾರಿ, ಮಂಡ್ಯ | 359 |
| 22 | ಕಾರ್ಮಿಕ ಅಧಿಕಾರಿ,ಮೈಸೂರು | 1640 |
| 23 | ಕಾರ್ಮಿಕ ಅಧಿಕಾರಿ, ರಾಯಚೂರು | 655 |
| 24 | ಕಾರ್ಮಿಕ ಅಧಿಕಾರಿ, ರಾಮನಗರ | 2171 |
| 25 | ಕಾರ್ಮಿಕ ಅಧಿಕಾರಿ, ತುಮಕೂರು | 803 |
| 26 | ಕಾರ್ಮಿಕ ಅಧಿಕಾರಿ, ಶಿವಮೊಗ್ಗ | 7530 |
| 27 | ಕಾರ್ಮಿಕ ಅಧಿಕಾರಿ, ಯಲ್ಲಾಪುರ | 2474 |
| 28 | ಕಾರ್ಮಿಕ ಅಧಿಕಾರಿ, ಕಾರವಾರ | 28796 |
| 29 | ಕಾರ್ಮಿಕ ಅಧಿಕಾರಿ, ಉಡುಪಿ | 187 |
| 30 | ಕಾರ್ಮಿಕ ಅಧಿಕಾರಿ ವಿಜಯಪುರ | 2237 |
| 31 | ಕಾರ್ಮಿಕ ಅಧಿಕಾರಿ, ವಿಜಯನಗರ | 1612 |
| 32 | ಕಾರ್ಮಿಕ ಅಧಿಕಾರಿ, ಯಾದಗಿರಿ | 870 |
| | **ಒಟ್ಟು** | **354128** |